# ರಾಗಿ ಉದ್ಯಮ ಇಂದಿರಾ ಶ್ರಮ!



ರಾಗಿ ಉತ್ಪನ್ನಗಳ ತಯಾರಿಕೆ

**ಕಿರುಧಾನ್ಯ ರಾಗಿಯಿಂದ ಹತ್ತು ಹಲವು ಉತ್ಪನ್ನಗಳನ್ನು ತಯಾರಿಸಿ ಉದ್ಯಮಶೀಲತೆಯಲ್ಲಿ ಸಂಪೂರ್ಣ ಯಶಕಂಡವರು ಬೆಂಗಳೂರಿನ ಜೆ.ಪಿ.ನಗರದ ಇಂದಿರಾ ಸಿ.ಗೌಡ. 'ಆಹಾರ–ಆರೋಗ್ಯ' ಎರಡರ ಬಗ್ಗೆ ಅಪಾರ ಕಾಳಜಿ, ಕಳಕಳಿಯನ್ನು ಹೊಂದಿರುವ ಈ ಮಹಿಳೆಯ ಸಾಧನೆಯ ಯಶೋಗಾಥೆ ಎಲ್ಲರಿಗೂ ಆದರ್ಶಪ್ರಾಯ.**

■ **ಉಮಾ ಅನಂತ್**

ಆರ್ಥಿಕ ಸ್ವಾವಲಂಬಿಯಾಗಬೇಕು ಎಂಬ ಮಹತ್ವಾಕಾಂಕ್ಷೆಯುಳ್ಳ ರಾಗಿ ಉದ್ಯಮಿ ಮಹಿಳೆಯೊಬ್ಬರ ಯಶೋಗಾಥೆ ಇದು. ಆರೋಗ್ಯಕ್ಕೆ ಅತ್ಯಂತ ಪೂರಕವಾದ ರಾಗಿಯನ್ನು ಬಳಸಿ ಹಲವು ಆರೋಗ್ಯಕರ ಉತ್ಪನ್ನಗಳನ್ನು ತಯಾರಿಸಿ ಮಾರುವುದರ ಜೊತೆಗೆ ಆರೋಗ್ಯ ಕಾಳಜಿಯನ್ನೂ ಮೂಡಿಸುವ ಬೆಂಗಳೂರಿನ ಇಂದಿರಾ ಅವರ ಪರಿಶ್ರಮ, ಸಾಧನೆ ಎಲ್ಲ ಮಹಿಳೆಯರಿಗೂ ಅನುಕರಣೀಯ ಆದರ್ಶ.

ಇಂದಿರಾ ಅವರು ರಾಗಿ ಉದ್ಯಮ ಆರಂಭಿಸಿದ್ದು 20 ವರ್ಷಗಳ ಹಿಂದೆ. ಅವರ ಮನೆಯ ಕಾರು ಶೆಡ್‌ನಲ್ಲಿ ರಾಗಿ ಹಿಟ್ಟನ್ನು ಮಾರುವ ಕೆಲಸ ಶುರು ಮಾಡುವ ಮೂಲಕ ಉದ್ಯಮಕ್ಕೆ ನಾಂದಿ ಹಾಡಿದವರು, ಇದೀಗ 'ಇಂದಿರಾ ಫುಡ್ಸ್' ಹೆಸರಿನ ಉತ್ಪನ್ನವನ್ನು ಮನೆಮಾತಾಗಿಸಿದ್ದಾರೆ. ಅಂದಹಾಗೆ, ಚೈತನ್ಯದ ಚಿಲುಮೆಯಂತಿರುವ ಈ ಮಹಿಳೆಯ ವಯಸ್ಸು ಕೇವಲ ಎಪ್ಪತ್ತೆರಡು.

ತಾಯಿಯ ಸಲಹೆ, ಮಾರ್ಗದರ್ಶನದಿಂದ ರಾಗಿ ಉದ್ಯಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಇಂದಿರಾ ಅವರ ಸಾಧನೆಯ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಅನೇಕ ಸಂಕಷ್ಟ, ಸವಾಲುಗಳನ್ನು ಎದುರಿಸಿದ ಅವರು, ಇಂದು ಯಶಸ್ವಿ ಮಹಿಳಾ ಉದ್ಯಮಿ. ತಮ್ಮ ಉದ್ಯಮದ ಆರಂಭ, ಸವೆಸಿದ ಹಾದಿ, ಯಶಸ್ಸಿನ ಬಗ್ಗೆ ಇಂದಿರಾ 'ಸುಧಾ'ದೊಂದಿಗೆ ತಮ್ಮ ಅನುಭವ– ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ.




ಇಂದಿರಾ ಸಿ. ಗೌಡ

◆ **ಬಡವರ ಆಹಾರಸಿರಿ ಈ ರಾಗಿ. ನೀವು ರಾಗಿ ಉದ್ಯಮವನ್ನೇ ಆಯ್ದುಕೊಂಡದ್ದು ಯಾವ ಕಾರಣಕ್ಕಾಗಿ?**

ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಅದಮ್ಯ ಉತ್ಸಾಹ ಮನದಲ್ಲಿತ್ತು. ಮನೆಯಲ್ಲಿ ನಾವು ಸಾಕಷ್ಟು ಅನುಕೂಲಸ್ಥರಾಗಿದ್ದರೂ 'ಸ್ವತಂತ್ರ'ಳಾಗಬೇಕು ಎಂಬ ಉತ್ಕಟ ಬಯಕೆ ನನ್ನಲ್ಲಿತ್ತು. ಆಗ ನನಗೆ ಐವತ್ತು ವರ್ಷ. ಹೊರಗೆ ಹೋಗಿ ಉದ್ಯೋಗ ಹುಡುಕಿ ಮಾಡುವ ವಯಸ್ಸು ಅದಲ್ಲ. ಓದಿದ್ದು ಬಿ.ಎಸ್‌ಸಿ. ಪದವಿ. ಯಾವುದೇ ಕ್ಷೇತ್ರದಲ್ಲಿ ತರಬೇತಿಯೂ ಇರಲಿಲ್ಲ. ಪತ್ರಿಕೆಯಲ್ಲಿ ಸ್ವ–ಉದ್ಯೋಗ, ಅದೂ ಫುಡ್ ಡೆವಲಪ್‌ಮೆಂಟ್ ಬಗ್ಗೆ ತರಬೇತಿ ಎಂಬ ಜಾಹೀರಾತು ನೋಡಿದೆ. ಬೆಂಗಳೂರಿನ 'ಅವೇಕ್' ಎಂಬ ಸ್ವಯಂಸೇವಾ ಸಂಸ್ಥೆಯಲ್ಲಿ ಉದ್ಯಮಶೀಲತಾ ತರಬೇತಿ ಪಡೆದೆ. ಸಣ್ಣ ಉದ್ಯಮ ಆರಂಭಿಸಿದರೆ ಕೆಲವು ಮಹಿಳೆಯರಿಗೆ ಕೆಲಸ ಒದಗಿಸಿ ಅವರನ್ನೂ ಸ್ವಾವಲಂಬಿ ಮಾಡಬಹುದು ಎಂಬ ಆಲೋಚನೆ ಮನಸ್ಸಲ್ಲಿ ಬಂತು. ಇದರ ಫಲವೇ ರಾಗಿ ಉದ್ಯಮ.